ಸಂಯುಕ್ತ ಕರ್ನಾಟಕ

# ಜೈನ್, ಎಸ್ಸಾರೆಮ್ ವಿವಿ ಗೆಲುವು

ಬೆಂಗಳೂರು, ಫೆ 16: ಜೈನ್ ವಿಶ್ವ ವಿದ್ಯಾಲಯದ ಆಶ್ರಯದಲ್ಲಿ ನಡೆಯುತ್ತಿರುವ 14ನೇ ಅಖಿಲ ಭಾರತ ಕ್ರೀಡೋತ್ಸವದಲ್ಲಿ ಶನಿವಾರ ನಡೆದ ಪುರುಷರ ವಿಭಾಗದ ವಾಲೀಬಾಲ್ ಪಂದ್ಯದಲ್ಲಿ ಚೆನ್ನೈನ ಎಸ್ಸಾರೆಮ್ ವಿವಿಯು 25-13, 25-16, 25-13 ಅಂತರದಿಂದ ತಮ್ಮ ಊರಿನದ್ದೇ ಆದ ಹಿಂದೂಸ್ತಾನ್ ವಿವಿ ವಿರುದ್ಧ ಜಯಿಸಿತು. ಇನ್ನೊಂದು ಪಂದ್ಯದಲ್ಲಿ ಬೆಂಗಳೂರಿನ ಸುರಾನಾ ಕಾಲೇಜು ತಂಡವನ್ನು ಚೆನ್ನೈನ ಸತ್ಯಭಾಮ ವಿವಿಯು 25-20, 22-25, 25-15, 19-25, 15-12 ಸೆಟ್‌ಗಳ ಅಂತರದಲ್ಲಿ ಮಣಿಸಿತು. ಇನ್ನು ಕರ್ನಾಟಕ ರಾಜ್ಯ ಹಾಕಿ ಅಂಗಣದಲ್ಲಿ ನಡೆದ ಹಾಕಿ ಪಂದ್ಯದಲ್ಲಿ ಬೆಂಗಳೂರಿನ ಜೈನ್ ವಿವಿಯು ಪೆನಾಲ್ಟಿ ಶೂಟೌಟ್‌ನಲ್ಲಿ ಬೆಂಗಳೂರಿನ ಅಲ್ ಅಮೀನ್ ಕಾಲೇಜು ತಂಡವನ್ನು 5-4 ಗೋಲುಗಳಿಂದ ಸೋಲಿಸಿದರೆ, ಇನ್ನೊಂದು ಪಂದ್ಯದಲ್ಲಿ ಚೆನ್ನೈನ ಡಿ.ಬಿ. ಜೈನ್ ಕಾಲೇಜು ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ ಸುರಾನಾ ಕಾಲೇಜು 8-7 ಗೋಲುಗಳ ಅಂತರದಿಂದ ಮಣಿಸಿತು.